## ರಾಜ್ಯಪಾಲರ ಭಾಷಣದ ಬಗ್ಗೆ ವಂದನಾ ನಿರ್ಣಯ

ಛೇರ್ಮನ್.—ಈಗ ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ವಂದನಾ ನಿರ್ಣಯ ಮಾನ್ಯ ವೀರಪ್ಪ ಮೊಯ್ಲಿಯವರು ನಿನ್ನೆಯ ದಿವಸ ನಿಲ್ಲಿಸಿದ್ದ ತಮ್ಮ ಭಾಷಣವನ್ನು ಮುಂದುವರಿಸಬಹುದು.

ಶ್ರೀ ಎಂ. ವೀರಪ್ಪ ಮೊಯ್ಲಿ (ಕಾರ್ಕಳ).—ಸನ್ಮಾನ್ಯ ಸಭಾಧ್ಯಕ್ಷರೇ ನಿನ್ನೆಯ ದಿವಸ ನಾನ ತರೀಕೆರೆ ಚುನಾವಣೆಗೆ ಸಂಬಂಧಪಟ್ಟಂತೆ ಮಾತನಾಡುತ್ತಿದ್ದೆ. ನನ್ನ ಅಭಿಪ್ರಾಯವಾದರೂ ಇಷ್ಟೆ ತರೀಕೆರೆ ಚುನಾವಣೆಯಾದ ಕೂಡಲೇ ಮಾನ್ಯ ಮುಖ್ಯ ಮಂತ್ರಿಗಳು, ಮಾನ್ಯ ಬೊಮ್ಮಾಯಿಯವರು ಮಾನ್ಯ ಸದಸ್ಯರಾದ ಬಂಗಾರಪ್ಪನವರ ಮೇಲೆ ಬಿದ್ದರು. ಬಂಗಾರಪ್ಪನವರು ನಮ್ಮ ಮೇಲೆ ಬಿದ್ದರು. ಅವರು ನಮ್ಮ ಅಭ್ಯರ್ಥಿಯಲ್ಲವೆಂದು ಹೇಳುತ್ತಾರೆ. ಇವರು ನಮ್ಮ ಅಭ್ಯರ್ಥಿಯಲ್ಲವೆಂದು ಹೇಳುತ್ತಾರೆ. ಈ ಸಚಿವರು ತರೀಕೆರೆಯಲ್ಲಿ ಸಾಕಷ್ಟು ಭಾಷಣವನ್ನು ಮಾಡಿದರು. ಜನತಾ ಪಕ್ಷದ ಪರವಾಗಿ ಸಾಕಷ್ಟು ನಾಯಕರು ಪ್ರಚಾರಕ್ಕೆ ಬಂದರು. ಅವರೂ ಕೂಡ ನಮ್ಮ ಅಭ್ಯರ್ಥಿಯಲ್ಲವೆಂದು ಹೇಳಿದರು. ಇದು ಯಾವಾಗ ಎಂದರೆ ಚುನಾವಣೆಯ ಫಲಿತಾಂಶ ಹೊರಬಿದ್ದಮೇಲೆ. ಇದು ತಮಗೂ ಸಹ ಸೆನಪಿರ ಬಹುದು, ಇವರು ಸರಿಯಾಗಿದ್ದಿದ್ದರೆ ತರೀಕೆರೆಯ ಜನರಿಗೆ ಸರಿಯಾಗಿ ಉತ್ತರವನ್ನು ಹೇಳುತ್ತಿದ್ದರಿ. ಆದರೆ ಚುನಾವಣೆಯಲ್ಲಿ ಸರಿಯಾದ ಫಲಿತಾಂಶ ಹೊರಬಿದ್ದಮೇಲೆ ನೀವು ಸುಮ್ಮನಾದಿರಿ. ಯಾರಿಗೇ ಆಗಲಿ ರಾಜಕೀಯದಲ್ಲಿ ಸ್ ಪ್ರಾಮಾಣಿಕತೆ ಇರಬೇಕು. ಅನುಕೂಲವಾದಾಗ ಅದನ್ನು ಒಪ್ಪಿಕೊಳ್ಳುವುದು, ಅನುಕೂಲ ಆಗದಿದ್ದರೆ ಅದರಲ್ಲಿ ನಮ್ಮ ಪಾಲು ಇಲ್ಲವೆಂದು ಹೇಳುವುದು ಸರಿಯಲ್ಲ. ಮಾನ್ಯ ಜಾಲಪ್ಪನವರ ಜಾತಿಯವರು ಯಾರೂ ಅಲ್ಲಿರಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ.—ಸ್ವಾಮಿ, ನೀವು ಏತಕ್ಕೆ ಜಾತಿಯ ಪ್ರಶ್ನೆಯನ್ನು ತರುತ್ತಿದ್ದೀರಿ. ಅಲ್ಲಿಗೆ ವಕ್ಕಲಿಗರು ಬಂದಿರಲಿಲ್ಲವೆ ? ಲಿಂಗಾಯಿತರು ಬಂದಿರಲಿಲ್ಲವೆ ? ನನಗೇ ಏತಕ್ಕೆ ನೀವು ಈ ರೀತಿ ಹೇಳುತ್ತಿದ್ದೀರಿ ?

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.—ಪಾಸ್ಟ್‌ವಾಂಶವನ್ನು ತಾವು ಒಪ್ಪಿಕೊಳ್ಳಿ ಅಲ್ಲಿ ಏನು ನಡೆಯಿತು ಅದನ್ನು ತಾವು ಸುಮ್ಮನೆ ಒಪ್ಪಿಕೊಳ್ಳಿ. ಇವತ್ತು ನಾನು ಇಷ್ಟುಮಾತ್ರ ಹೇಳುತ್ತೇನೆ. ಇವತ್ತು ತಮಗೆ ಅಧಿಕಾರ ಬಂದಿದೆ. ಇದನ್ನು ಮುಂದಿನ ೫ ವರ್ಷಗಳವರೆಗೂ ಚೆನ್ನಾಗಿ ನಿರ್ವಹಿಸಿಕೊಂಡು ಹೋಗಿ. ಅದಕ್ಕೆ ನಾವು ಅಡ್ಡಿಬರುವುದಿಲ್ಲ ನೀವು ಇತ್ತ ರಾಜಕೀಯ ಪಕ್ಷವೂ ಅಲ್ಲ, ಅತ್ತ ಪ್ರಾದೇಶಿಕ ಪಕ್ಷವೂ ಅಲ್ಲ ಎನ್ನುವ ಮಟ್ಟಕ್ಕೆ ಬಂದಿದ್ದೀರಿ. ದೆಹಲಿಯ ಮೆಟ್ರೋಪಾಲಿಟನ್ ಸಿಟಿ ಚುನಾವಣೆಯಲ್ಲಿ ಒಂದು ಸೀಟು ಬಂತು. ದೆಹಲಿ ಕಾರ್ಪೊರೇಷನ್ ಚುನಾವಣೆಯಲ್ಲೂ ಒಂದೇ ಸೀಟು ಬಂತು. ಆಷ್ಟೇ ಆ ಆಂಧ್ರದಲ್ಲಿ ಕೂಡ ನಿಮಗೆ ಒಂದೇ ಒಂದು ಸೀಟು ಬಂತು.....

ಶ್ರೀ ಆರ್.ಎಲ್. ಜಾಲಪ್ಪ.—ಗುಜರಾತ್‌ನಲ್ಲಿ ಕಾಂಗ್ರೆಸ್ ನಿರ್ನಾಮವಾಯಿತು.....

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.—ಯಾವ ದೃಷ್ಟಿಯಲ್ಲಿಯೇ ಆಗಲಿ ನಮ್ಮ ಸಿಂಪತಿ, ನಮ್ಮ ಕರುಣೆ ನಿಮಗೆ ಇದೆ. ಆದರೆ ನೀವು ಅದನ್ನು ಎಷ್ಟರಮಟ್ಟಿಗೆ ಸುಧಾರಿಸಿಕೊಂಡು, ಉಳಿಸಿಕೊಂಡು ಹೋಗುತ್ತೀರಿ ಎಂಬುದು ಕರ್ನಾಟಕ ಜನತೆಯಲ್ಲಿ ಇನ್ನೂ ಪ್ರಶ್ನಾರ್ಥಕವಾಗಿಯೇ ಉಳಿದಿದೆ. ಇವತ್ತು ನೀವು ಮಂತ್ರಿಮಂಡಲವನ್ನು ರಚನೆ ಮಾಡಿದ್ದೀರಿ. ಮಾನ್ಯ ರಘುಪತಿಯವರು ರಾಜಭವನದಲ್ಲಿ ಪ್ರತಿಜ್ಞೆಯನ್ನು ಸ್ವೀಕಾರ ಮಾಡುತ್ತಾ ನಡೆದುಕೊಂಡ ವರ್ತನೆ ನಿಮ್ಮ ಪಕ್ಷಕ್ಕೆ ಮತ್ತು ಕರ್ನಾಟಕ ರಾಜ್ಯಕ್ಕೆ ಕೋಭೆಯನ್ನು ತರತಕ್ಕದ್ದಲ್ಲ. ದಯವಿಟ್ಟು ಇದನ್ನು ತಿಳಿದುಕೊಳ್ಳಿ.....

(ಗೊಂದಲ)

ನಾನು ಈ ವಿಚಾರವನ್ನು ಈಗಲೇ ಮಾತನಾಡುತ್ತಿರಲಿಲ್ಲ. ಆದರೆ ಹಿರಿಯ ಸದಸ್ಯರಾದಂಥ, ಸಮಾಜವಾದದಲ್ಲಿ ನಂಬಿಕೆ ಇರತಕ್ಕಂಥವರು ನಮ್ಮ ಪಕ್ಷದ ಬಗ್ಗೆ ನಮ್ಮ ಅಡಳಿತದ ಬಗ್ಗೆ ಮಾತನಾಡಿದರು. ಆದ್ದರಿಂದ.....

ಶ್ರೀ ಎಂ. ರಘುಪತಿ.—ನನ್ನ ಬಗ್ಗೆ ತಾವು ಏತಕ್ಕೆ ಮಾತನಾಡುತ್ತೀರಿ ? ಸಂಸದೀಯ ವ್ಯವಹಾರಗಳಲ್ಲಿ ಒಬ್ಬರ ಬಗ್ಗೆ ಮಾತನಾಡುವಾಗ.....

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅವರು ನಿಮ್ಮನ್ನು ಅಭಿನಂದಿಸುತ್ತಿದ್ದಾರೆ...

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ ಆಪತ್ತು ನಡೆದ ಘಟನೆಯು ಬಗ್ಗೆ ಹೇಳುವುದಾದರೆ...

ಶ್ರೀ ಎಂ. ವೀರಪ್ಪ ಮೊಯ್ಲಿ.—ತಾವು ಹೇಳಿದ್ದೀರಿ, ಎರಡು ಪತ್ರಿಕೆಗಳಲ್ಲೂ ಪ್ರಕಟಣೆಯಾಗಿರುತ್ತದೆ ಎಂದು. ಮುಖ್ಯಮಂತ್ರಿಯವರೊಂದಿಗೆ ಹೊಂದಿಕೆಯಾದ ಮೇಲೆ ಅನೇಕ ದಿವಸಗಳು ಕಳೆದ ನಂತರ ಸ್ಪಷ್ಟೀಕರಣ ಕೊಟ್ಟರೆ ಅದನ್ನು ನಂಬುವವರು ಬೇರೆ, ನಾವಲ್ಲ.

ಶ್ರೀ ಎಂ. ರಘುಪತಿ.—ಯಾರು ನಂಬಿದ್ದರೂ ರಘುಪತಿಯವರು ನಂಬಿರುತ್ತಾರೆ. ಆವತ್ತು ನಡೆದದ್ದು ಇಷ್ಟೇ. ಕಾಬಿನೆಟ್ ದರ್ಜೆಯೆಂದು ಹೇಳಿದರು. ಅದರಲ್ಲೂ ಕಿಕ್ಕಿರಿದ ವಾತಾವರಣ. ಜನರ ಗಲಾಟೆಯಲ್ಲಿ ಸರಿಯಾಗಿ ಕೇಳಲಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಕರೆದದ್ದು ಕೇಳದೆ ಇದ್ದದ್ದರಿಂದ ಸ್ವಲ್ಪ ಕನ್‌ಫ್ಯೂಷನ್ ಆಯಿತು. ಆನಂತರ ಪ್ರಮಾಣವಚನ ಸ್ವೀಕಾರ ಮಾಡಿದ್ದು ಆಯಿತು. ಮಾನ್ಯ ಪ್ರಧಾನ ಮಂತ್ರಿಯವರು ಮೊಟ್ಟಮೊದಲನೆ ಬಾರಿ ಮಂತ್ರಿಮಂಡಲವನ್ನು ವಿಸ್ತರಣೆ ಮಾಡಿದಂಥ ಕಾಲದಲ್ಲಿ ಮಾನ್ಯ ಭಗವದ್-ಜ-ಅಜಾದ್‌ರವರನ್ನು ಆವತ್ತಿನ ದಿವಸ ಹೆಸರು ಕರೆದಾಗ ಪ್ರಮಾಣ ವಚನವನ್ನು ಸ್ವೀಕಾರ ಮಾಡಲಿಕ್ಕೆ ಬರಲಿಲ್ಲ. ಅದನ್ನು ತಾವು ನೆನಪು ಮಾಡಿಕೊಳ್ಳಿ.

ಶ್ರೀ ಜೆ.ಎಚ್. ಪಟೇಲ್.—ಅಂಥದ್ದೆಲ್ಲ ಕೆಲವು ಕೆಟ್ಟ ಪದ್ಧತಿಗಳನ್ನೇ ಮಾಡಿಕೊಂಡು ಬಂದಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ತಾವು ಹೇಳಿದ ವಿಚಾರ ಅಪ್ರಸ್ತುತ. ಭಗವದ್-ಜ-ಅಜಾದ್ ರವರು ಅಂದು ಪ್ರಮಾಣ ವಚನವನ್ನು ಸ್ವೀಕಾರ ಮಾಡಲು ಅವರು ಇಲ್ಲಿ ಇರಲೇ ಇಲ್ಲ. ಅದನ್ನು ತಾವು ತಿಳಿದುಕೊಳ್ಳಿ. ಕ್ಯಾಬಿನೆಟ್ ದರ್ಜೆ ಕೊಡಲಿಲ್ಲವೆಂದು ಕುಳಿತಿದ್ದೀರಿ. ಮಾನ್ಯ ರಾಮಕೃಷ್ಣ ಹೆಗಡೆಯವರನ್ನು ಹೆದರಿಸಿದರೆ ಸರ್ಕಾರದಲ್ಲಿ ಏನು ಬೇಕಾದರೂ ಕೊಡುತ್ತಾರೆಂದು ಹೆದರಿಸಿದಿರಿ ಅವರನ್ನ.

ಶ್ರೀ ಎಂ. ರಘುಪತಿ.—ನಾನೇನು ಅವರನ್ನು ಬೆದರಿಸಿ ಅಧಿಕಾರವನ್ನು ತೆಗೆದುಕೊಳ್ಳಲಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈಗ ನಮ್ಮ ಸಂಸ್ಕೃತಿ, ಪರಂಪರೆಯ ಬಗ್ಗೆ ಹೇಳುವುದಾದರೆ ವಿರೋಧ ಪಕ್ಷದ ನಾಯಕರು ಎದ್ದುನಿಂತು ಮಾತನಾಡುವಾಗ ಸಾವಧಾನದಿಂದ ಕೇಳಬೇಕು, ಮತ್ತು ಸಭಾನಾಯಕರು ಎದ್ದುನಿಂತು ಮಾತನಾಡುವಾಗ ಸಾವಧಾನದಿಂದ ಕೇಳಬೇಕು ಎಂದು ಹೇಳಿದ್ದನ್ನು ತಾವು ಈಗಾಗಲೇ ಮರೆತುಬಿಟ್ಟರೆ ಇದು ಏನು ಸಂಸ್ಕೃತಿ ? ವಿಚಾರವಿಲ್ಲದ್ದು. ಸನ್ಮಾನ್ಯ ಅಧ್ಯಕ್ಷರೇ, ಈಗ ಬಹುಶಃ ಆ ವಿಚಾರವನ್ನು ನಾವು ಪ್ರಸ್ತಾಪ ಮಾಡುತ್ತಲೇ ಇರಲಿಲ್ಲ. ಏತಕ್ಕೆಂದರೆ ಸನ್ಮಾನ್ಯ ಹಿರಿಯ ಸದಸ್ಯರಾದಂಥಮಹೇಶ್ವರಪ್ಪನವರು ಟ್ರಿಬ್ಯುನಲ್ ಬಗ್ಗೆ ಮಾತನಾಡುತ್ತಾ ಟ್ರಿಬ್ಯುನಲ್‌ಗಳು ಹೇಗೆಕೆಲಸ ಮಾಡುತ್ತಿದ್ದವು ಮತ್ತು ನಮ್ಮ ಪಕ್ಷದ ಸದಸ್ಯರ ಬಗ್ಗೆ ಮತ್ತು ಹಿಂದಿನ ಮುಖ್ಯಮಂತ್ರಿಗಳ ಬಗ್ಗೆ ಪ್ರಸ್ತಾಪಮಾಡಿದರು. ನಾವು ಸಾಮಾನ್ಯವಾಗಿ ಮಾಡಿದ್ದು ಹೇಳಲೇಬೇಕಾಗುತ್ತದೆ. ಏತಕ್ಕೆಂದರೆ ಪ್ರಸಂಗ ಬಂದಾಗ ಯಾರೇ ಮೆಂಬರ್ ಇರಲಿ ಸರಿಯಾದ ವಿಚಾರಕ್ಕೆ ಬರುತ್ತಾರೆ ಕಳೆದ ಮೂವತ್ತೈದು ವರ್ಷಗಳಲ್ಲಿ ನಾವು ಏನು ಮಾಡಿದ್ದೇವೆ ಎನ್ನುವುದು ಜನರಿಗೆ ಗೊತ್ತಿದೆ. ಕರ್ನಾಟಕ ರಾಜ್ಯದ ಜನತೆಗೆ ತಾವು ಏನು ಮಾಡಿದ್ದೀರಿ ಮತ್ತು ಏನು ಮಾಡುತ್ತಿದ್ದೀರಿ ಎನ್ನುವುದನ್ನು ಕೂಡ ಜನ ಕಾದು ನೋಡುತ್ತಿದ್ದಾರೆ ತಾವು ಮಾಡಿದ್ದು ಗೊತ್ತಿದೆ, ಕೇಂದ್ರದಲ್ಲಿ ೫೫ ವರ್ಷಗಳ ಕಾಲ ಅಧಿಕಾರವನ್ನು ಕೊಟ್ಟಿದ್ದರೂ ಕೂಡ ಎರಡುವರ್ಷ ಎಂಟುತಿಂಗಳು ಅಧಿಕಾರದಲ್ಲಿದ್ದು ಜನತೆಗೆ ಏನುಮಾಡಿದ್ದೀರಿ ಎಂದು ಭರತಖಂಡದ ಜನತೆಗೆ ಎಲ್ಲ ಗೊತ್ತಿದೆ ಕೇಂದ್ರದಲ್ಲಿ ಪ್ರತಿದಿವಸ ವಾದವಿವಾದಕ್ಕೆ ಇಳಿಯದಿದ್ದರೆ ಬಹುಶಃ ಬಹಳ ಗಂಭೀರವಾಗಿ ಕೆಲ ಸಮಯ ಕೆಲಸ ಮಾಡಿಕೊಂಡು ಕೇಂದ್ರ ಸರ್ಕಾರದಲ್ಲಿ ಅಧಿಕಾರದಲ್ಲಿ ಇರಬಹುದಾಗಿತ್ತು. ಅಲ್ಲಿ ಏನು ಕೆಲಸ ಮಾಡಿದಿರಿ ಅದೇ ಕೆಲಸವನ್ನು ಈಗಲೂ ನೀವು ಮಾಡುತ್ತಾಹೋದರೆ ಅಲ್ಲಿ ಎರಡು ವರ್ಷ ಎಂಟು ತಿಂಗಳಾದರೂ ಅಧಿಕಾರ ಮಾಡಿದಿರಿ, ಇಲ್ಲಿ ತಾವು ಎಂಟು ತಿಂಗಳು ಅಧಿಕಾರವನ್ನು ನಡೆಸಲಿಕ್ಕೆ ಆಗುತ್ತದೋ ಇಲ್ಲವೋ ಎನ್ನುವುದು ಸಮಸ್ಯೆಯಾಗಿ ಉಳಿಯುತ್ತದೆಂದು ನಾವು ಹೇಳುತ್ತಾ ಇರು

ವುದು. ಆದ್ದರಿಂದ ಹಿಂದಿನ ಸರ್ಕಾರ ಮಾಡಿದ್ದನ್ನೇ ಹೇಳಿಕೊಂಡು ಹೋಗುತ್ತಿದ್ದರೆ ಒಂದು ರೀತಿ ತೇಜೋವಧೆ ಮಾಡಿದಂತಾಗುತ್ತದೆ. ಆದ್ದರಿಂದ ನಿಮಗೆ ಏನು ಲಾಭವೂ ಆಗುವುದಿಲ್ಲ. ನಮಗೆ ಲಾಸ್ ಕೂಡ ಆಗುವುದಿಲ್ಲ. ಇದನ್ನು ತಾವು ತಿಳಿದುಕೊಳ್ಳಬೇಕು. ಏತಕ್ಕೆಂದರೆ ನಿಮ್ಮ ಬಿ.ಜೆ.ಪಿ. ಸದಸ್ಯರು ಕೆಲವು ತತ್ವಕ್ಕೆ ಅಂಟಿಕೊಂಡು ಬಂದಿರತಕ್ಕಂಥವರು ಮಾನ್ಯ ರಘುಪತಿಯವರು ಹೋಗಂತಿದ್ದಾರೆ. ತಾವು ಇದ್ದರೆ ಒಳ್ಳೆಯದು, ತಾವು ಸ್ವಲ್ಪ ಕುಳಿತುಕೊಂಡು ಕೇಳಿ, ತಾವು ಎದ್ದು ಹೋಗಬಾರದು. ಏತಕ್ಕೆಂದರೆ ಮಾನ್ಯ ರಘುಪತಿಯವರು ಈಗ ಪಬ್ಲಿಕ್ ರಿಲೇಷನ್ ವರ್ಕ್ ಮಾಡುತ್ತಿದ್ದಾರೆ.

ಶ್ರೀ ಎಂ. ರಘುಪತಿ.—ಪಬ್ಲಿಕ್ ರಿಲೇಷನ್ ವರ್ಕ್ ಯಾವಾಗಲೂ ಯಾರಿಗೂ ಮಾಡಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಹಿಂದೆ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಆವರ ಹಿಂದೆ ಪಬ್ಲಿಕ್ ರಿಲೇಷನ್ ಮಾಡಿದಿರಿ. ಆವಾಗ ಅವರು ನಿಮ್ಮನ್ನು ಮಂತ್ರಿ ಮಾಡಲಿಲ್ಲ. ಆಮೇಲೆ ಮಾನ್ಯ ಬಂಗಾರಪ್ಪನವರನ್ನು ಒಲಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡಿದಿರಿ. ಆದರೆ ಅವರೊಳಗೆ ನಿಮಗೆ ಏನಾಯಿತೋ ಗೊತ್ತಿಲ್ಲ. ಕೊನೆಗೆ ಆವರನ್ನು ಬಿಟ್ಟು ಮಂತ್ರಿಗಳಾಗಲು ಯಾರು ಯಾರ ಬೆನ್ನನ್ನೋ ಹತ್ತಿದಿರಿ, ಆವರಿಗೆ ಸಾಕಷ್ಟು ಸಹಾಯ ಮಾಡಿದಿರಿ, ಸೇವೆ ಮಾಡಿದಿರಿ, ಕೊನೆಗೆ ರಾಮಕೃಷ್ಣ ಹೆಗಡೆಯವರು ಮಂತ್ರಿಯಾಗಿ ಮಾಡಿದರು.

ಶ್ರೀ ಎಂ. ರಘುಪತಿ.—ಮಾನ್ಯ ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದಾಗ ಮಾನ್ಯ ವಿರೋಧಪಕ್ಷದ ನಾಯಕರಾದ ತಾವು ಏನು ಮಾಡಿದಿರಿ, ಎಷ್ಟು ಮಾಡಿದಿರಿ ಎನ್ನುವುದು ನಮಗೂ ಗೊತ್ತಿದೆ. ಮಾನ್ಯ ಗುಂಡೂರಾಯರಿಗೂ ನನಗೂ ಏನೋ ವಯಸ್ಸಿಗೆ ವಿರೋಧವಾದಾಗ ಖಡಾಖಂಡಿತವಾಗಿ ವಿರೋಧ ಮಾಡಿದವರಲ್ಲಿ ನಾನೂ ಒಬ್ಬ.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಮೊಯ್ಲಿಯವರು ಹೇಳುವುದರಲ್ಲಿ ಮಾನ್ಯ ರಘುಪತಿಯವರು ಹೇಳುವುದರಲ್ಲಿ ಎರಡು ಒಂದೇ ತಕ್ಕಡಿಯಲ್ಲಿ ಹಾಕಿದಂತೆ ಅರ್ಥವಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಶ್ರೀ ಅಬ್ದುಲ್ ನಜೀರ್‌ಸಾಬ್‌ರವರಿಗೆ ಎಂ.ಎಲ್.ಸಿ ಕೊಟ್ಟಿದ್ದರೆ ಆವರೂ ಕೂಡ ನಿಮ್ಮ ಕಡೆ ಬರತ್ತಿರಲಿಲ್ಲ. ಆದರಲ್ಲೂ ರಾಜಕೀಯ ಮಾಡಿದ್ದೀರಿ ಸದನದ ಹೊರಗೂ ಮತ್ತು ಒಳಗೂ ಆವರ ಬೆಂಬಲವಿರಲಿ ಎಂದು ಮತ್ತು ಆವರು ನಿಮ್ಮನ್ನು ಬಿಟ್ಟು ಹೋಗದಿರಲಿ ಎಂದು ಆವರನ್ನು ಮಂತ್ರಿಯಾಗಿ ಮಾಡಿದ್ದೀರಿ.

ಶ್ರೀ ಎಂ. ರಘುಪತಿ.—ತಾವು ಯಾವ ಕಾರಣಕ್ಕಾಗಿ ಮಾನ್ಯ ದೇವರಾಜ ಆರಸ್‌ರವರನ್ನು ಬಿಟ್ಟು ಶ್ರೀಮತಿ ಇಂದಿರಾಗಾಂಧಿಯವರನ್ನು ಆವಲಂಬಿಸಿದಿರಿ ಎನ್ನುವುದು ನಮಗೂ ಗೊತ್ತಿರುತ್ತದೆ.

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷರೇ, ಇಲ್ಲಿ ಮಾತನಾಡುವಾಗ ರಾಜಕಾರಣವನ್ನು ಪ್ರಸ್ತಾಪ ಮಾಡುವುದು ಬೇಡವೆಂದು ಈಗ ತಾನೆ ಹೇಳಿದರು. ಮತ್ತೆ ಅದನ್ನೇ ಮಾಡುತ್ತಿದ್ದಾರಲ್ಲ.

ಶ್ರೀ ಎಂ, ವೀರಪ್ಪ ಮೊಯ್ಲಿ.—ಆದೇ ವಿಚಾರಕ್ಕೆ ಬರುತ್ತೇನೆ, ಮಾನ್ಯ ರಘುಪತಿಯವರು ಮಾತನಾಡಿದ್ದರಿಂದ ಈ ಪ್ರಸಂಗವನ್ನು ಎತ್ತಬೇಕಾಯಿತು.

ಶ್ರೀ ಆರ್.ಎಲ್. ಜಾಲಪ್ಪ.—ತಾವು ಮಾನ್ಯ ಆರಸುರವರನ್ನು ಏತಕ್ಕೆ ಅಂಟಿಕೊಂಡಿದ್ದಿರಿ ? ಆವರನ್ನು ಅಂಟಿಕೊಂಡು ಆಧಿಕಾರಕ್ಕೆಬಂದು ಕೊಂಡಮೇಲೆ ಹಣಕಾಸು ಕೊಡಲಿಕ್ಕೆ ಏನು ಇರಲಿಲ್ಲ ಆಧಿಕಾರ ಕೊಡಲಿಕ್ಕೆ ಏನೂ ಇರಲಿಲ್ಲ.ಮಾನ್ಯ ಆರಸುರವರು ತಮ್ಮ ಊರಿನಿಂದ ತಮ್ಮನ್ನು ಕರೆದುಕೊಂಡು ಬಂದು ಎಂ.ಎಲ್.ಎ. ಮಾಡಿದರು, ಎರಡನೆಯ ಸಲ ಮಂತ್ರಿ ಪದವಿಯನ್ನು ಕೊಡಲಿಲ್ಲವೆಂಬ ಕಾರಣದಿಂದ ಆವರನ್ನು ಬಿಟ್ಟಿರಿ. ನನಗೂ ಲ್ಯಾಂಡ್‌ಮಾರ್ಟ್‌ಗೇಜ್ ಬ್ಯಾಂಕ್ ಆಧ್ಯಕ್ಷ ಸ್ಥಾನ ಕೊಟ್ಟಿದ್ದರು, ಆವರು, ಆದನ್ನು ಕಿತ್ತುಕೊಂಡರೂ ಆವರ ತತ್ವಗಳಿಗೆ ಅಂಟಿಕೊಂಡೇ ಇದ್ದೆ. ತಪ್ಪಿಗೆ ಏನು ಸಹಾಯ ಮಾಡಿದರು ನನಗೆ ಏನುಸಹಾಯ ಮಾಡಿದರು ಎಂಬುದು ನನಗೆ ಗೊತ್ತಿದೆ. ನಿಷ್ಟೆಯಿಂದ ಇದ್ದದ್ದಕ್ಕೆ ನನಗೂ ಒಂದು ಸೀಟು ಕೊಟ್ಟರು.ಮತ್ತೆ ಅದನ್ನೇ ಕಂಟಿನ್ಯೂ ಮಾಡಿಕೊಂಡು ಬಂದಿರುತ್ತಾರೆ ಹೊರತು ಮತ್ತೇನು ಇಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಆದರ ಬಗ್ಗೆ ಬೇಕಾದರೆ ಬೇರೆ ಸಮಯದಲ್ಲಿ ಚರ್ಚೆ ಮಾಡೋಣ.

ಶ್ರೀ ಆರ್. ಎಲ್. ಜಾಲಪ್ಪ.—ತಾವು ಹೇಳಿದ್ದರಿಂದ ನಾನೂ ಸಹ ಹೇಳಬೇಕಾಯಿತು.

ಶ್ರೀ ಎಂ. ವೀರಪ್ಪಮೊಯ್ಲಿ.—ಹೌದು. ಈಗ ಆ ವಿಚಾರ ಬೇಡ. ಆದರೆ ಸ್ವಾರ್ಥಕ್ಕಾಗಿ ಹಾಗೂ ಅಧಿಕಾರಕ್ಕಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುವವರು ನಾವಲ್ಲ. ಒಂದು ತತ್ವಕ್ಕಾಗಿ ಮತ್ತು ಒಂದು ಪಕ್ಷದ ಹಿತದೃಷ್ಟಿಯಿಂದ ನಾವು ಆ ಪಕ್ಷದ ಹಿಂದೆ ಹೋದಂಥ ಜನರು. ಆದರೆ ಇವರು ಕ್ರಾಂತಿರಂಗದ ಹೆಸರು ಹೇಳಿಕೊಂಡು ಮತ್ತು ಅದರ ಅಧ್ಯಕ್ಷರ ಹಿಂದೆಯೇ ಇದ್ದುಕೊಂಡು ನಂತರ ಅಧಿಕಾರದ ಪ್ರಶ್ನೆ ಬಂದಾಗ ಆ ಕ್ರಾಂತಿರಂಗವನ್ನೇ ಬಿಟ್ಟು ಹೋದಂಥವರು.

ಶ್ರೀ ಎಂ. ರಘುಪತಿ.—ನೀವುಗಳು ಬಂಗಾರಪ್ಪನವರ ಕೈಬಿಟ್ಟಾಗ ನಾವೇ ಅವರ ಜೊತೆಯಲ್ಲಿ ಇದ್ದವರು. ಅವರ ಕಷ್ಟಕಾಲದಲ್ಲಿಯೂ ಸಹ ನಾನು ಅವರ ಜೊತೆಯಲ್ಲಿ ಇದ್ದೆ ಎಂಬುದು ಎಲ್ಲರಿಗೂ ಗೊತ್ತಿದೆ.

(ಗೊಂದಲ)

ಶ್ರೀ ವೆಲ್ಫಿಕೇಲ್ ಬಿ. ಫರ್ನಾಂಡಿಸ್.—ಮಾನ್ಯ ರಘುಪತಿಯವರು ಈ ಮೊದಲು ಕ್ರಾಂತಿರಂಗದ ಅಧ್ಯಕ್ಷರ ಜೊತೆಯಲ್ಲಿಯೇ ಇದ್ದರು ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದಾರೆ. ಆದರೆ ಆಗ ಶ್ರೀ ಅಬ್ದುಲ್ ನಜೀರ್ ಸಾಬ್ ಅವರು ಕ್ರಾಂತಿರಂಗದ ಅಧ್ಯಕ್ಷರಾಗಿದ್ದರು. ಈಗ ಆ ಪಕ್ಷದ ಪುನರ್‌ರಚನೆಯಾದ ಮೇಲೆ ಶ್ರೀ ಬಂಗಾರಪ್ಪನವರು ಅವರು ಅಧ್ಯಕ್ಷರಾಗಿರಬಹುದು. ಆದರೆ ಇದಕ್ಕೂ ಮೊದಲು ಇವರು ಅಧ್ಯಕ್ಷರಾಗಿರಲಿಲ್ಲ.

ಶ್ರೀ ಎಂ. ರಘುಪತಿ.—ಒಬ್ಬರ ಪರ ವಕಾಲತ್ತು ವಹಿಸದ ತಾವು ಈಗ ಏಕಕ್ಕೆ ಆ ಕೆಲಸ ಮಾಡುತ್ತಿದ್ದೀರಿ?

ಶ್ರೀ ಎಂ. ವೀರಪ್ಪಮೊಯ್ಲಿ —ನಮಗೆ ಆ ಕೆಲಸ ಬೇಡ. ಆದರೆ ತಾವು ಒಬ್ಬರ ಪರ ವಕಾಲತ್ತು ವಹಿಸಿ ಏನೇನು ಮಾಡಿದ್ದೀರಿ ಎಂಬುದು ನನಗೆ ಗೊತ್ತಿದೆ. ಮಾನ್ಯ ರಘುಪತಿಯವರು ರಾಜಕೀಯವಾಗಿ ಮಾತನಾಡುವುದಿದ್ದರೆ ಅದಕ್ಕೆ ನಾವು ಉತ್ತರ ಕೊಡುತ್ತೇವೆ. ಅವರ ಒಂದು ಪ್ರಾಮಾಣಿಕತೆಯ ಮೇಲೆ ಪ್ರಶ್ನೆ ಮಾಡುವುದಕ್ಕೆ ನಾವು ತಯಾರಿಲ್ಲ. ಅವರು ಎಷ್ಟು ಪ್ರಾಮಾಣಿಕರೆಂಬುದು ನನಗೆ ಗೊತ್ತು. ಆದ್ದರಿಂದ.....

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.—ನೀವು ನಮ್ಮ ನಮ್ಮಲ್ಲಿಯೇ ತಂದು ಹಾಕುವುದು ಬೇಡ.

ಶ್ರೀ ಎಂ. ವೀರಪ್ಪಮೊಯ್ಲಿ.—ನೀವು ಅಧಿಕಾರದಲ್ಲಿರುವಷ್ಟು ಕಾಲವೂ ಚೆನ್ನಾಗಿ ಇರಿ. ಅದಕ್ಕೆ ನಾವೇನೂ ಅಡ್ಡಿ ಬರುವುದಿಲ್ಲ. ಆದರೆ ಶ್ರೀ ದೇವರಾಜ ಅರಸ್ ಅವರ ಹೆಸರನ್ನು ಮಾತ್ರ ಇಲ್ಲಿ ದಯವಾಡಿ ತರಬೇಡಿ. ಅದು ಅನಾವಶ್ಯಕ. ಅವರು ಈಗ ತೀರಿಕೊಂಡಿದ್ದಾರೆ. ಆದ್ದರಿಂದ ಅವರ ಹೆಸರು ಹೇಳಿ ಇಲ್ಲಿ ರಾಜಕೀಯ ಮಾಡಬೇಡಿ. ಅವರು ನಿಮಗೇನು ಮಾಡಿದ್ದರು ನೀವು ಅವರಿಗೇನು ಮಾಡಿದ್ದೀರಿ ಎಂಬುದೆಲ್ಲಾ ಈಗ ಬೇಡ.

ಇನ್ನು ರಾಜಕೀಯ ಭ್ರಷ್ಟಾಚಾರವನ್ನು ತೊಡೆದು ಹಾಕುವ ಬಗ್ಗೆ ಇವರು ಈ ಸದನದಲ್ಲಿ ಸಾಕಷ್ಟು ಸಲ ಹೇಳಿದ್ದಾರೆ. ಇದರ ಜೊತೆಗೆ ಇವರು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಸಹ ಹೇಳಿದ್ದಾರೆ. ಇವರ ನಾಯಕರಾದಂಥ ಸನ್ಮಾನ್ಯ ಮುಖ್ಯಮಂತ್ರಿಯವರು ಈ ವಿಚಾರದಲ್ಲಿ ಯಾವ ತರಹ ನಡೆದು ಕೊಳ್ಳುತ್ತಾರೆಂಬುದನ್ನು ಕಾದು ನೋಡಬೇಕಾಗಿದೆ. ಈ ಮೊದಲು ಇವರು ಎಕ್ಸೈಜ್ ಮಂತ್ರಿ ಗಳಾಗಿದ್ದಾಗ ನಡೆದಂಥ ಪ್ರಕರಣದಲ್ಲಿ ಹೈಕೋರ್ಟಿನ ತೀರ್ಮಾನ ಯಾವ ರೀತಿ ಇದೆ ಎಂಬುದಕ್ಕೆ ಒಂದು ಪ್ಯಾರಾಗ್ರಾಫ್‌ನ್ನು ಇಲ್ಲಿ ಓದಿ ಹೇಳಲು ಇಷ್ಟಪಡುತ್ತೇನೆ. ಈ ಒಂದು ಪ್ರಕರಣದ ಬಗ್ಗೆ ನಾನು ಈಗ ಹೆಚ್ಚು ವಿಶ್ಲೇಷಣೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಏಕೆಂದರೆ ಇದು ಈಗಾಗಲೇ ಜಗಜ್ಜಾಹೀರಾಗಿದೆ. ಭೂಮಾರೆಡ್ಡಿ ಪ್ರಕರಣದಲ್ಲಿ ಹೈಕೋರ್ಟಿನ ತೀರ್ಪು ಈ ರೀತಿ ಇದೆ :—

Writ Petition No. 1889 of 1968, Sri P. Bhooma Reddy Vs. State of Mysore, Judgment by Hon'ble Mr. Justice K. R. Gopivallabha Iyengar and Hon'ble Mr. Justice K. Bhimaiah.

I quote para No. 15 only :

"It is rather surprising that the Government acted so hastily and issued licenses to Respondent No. 4 on or about September 18th. It is not quite clear how licenses in respect of 1168 shops could be issued on a single day. The effect of this precipitate action on the part of the Government was that the appellant could not on the next day obtain a stay of the operation of the High Courts order. There is ground for suspecting that the Government was favouring Respondent No. 4."

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಆ ಸಮಯದಲ್ಲಿ ಶ್ರೀ ವೀರೇಂದ್ರಪಾಟೀಲ್ ಅವರು ಮುಖ್ಯಮಂತ್ರಿಗಳಾಗಿದ್ದರೆಂದು ಕಾಣುತ್ತದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಶ್ರೀ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿದ್ದರೂ ಸಹ ಈ ಕೇಸ್‌ನಲ್ಲಿ ಅವರ ಮೇಲೆ ಆಪಾದನೆ ಏನೂ ಇಲ್ಲ. ಏನಿದ್ದರೂ ಆಗಿನ ಎಕ್ಸೈಜ್ ಮಂತ್ರಿಗಳ ಮೇಲೆ ಆರೋಪವಿರುವುದು. ಆದ್ದರಿಂದ ನಾನು ಹೇಳುವುದನ್ನು ಸಾವಧಾನವಾಗಿ ಕೇಳಿ.

ಶ್ರೀ ಆರ್, ಎಲ್. ಜಾಲಪ್ಪ.—ಸ್ವಾಮಿ, ಇವರು.....

ಶ್ರೀ ಎಂ. ವೀರಪ್ಪಮೊಯ್ಲಿ.—ಸ್ವಾಮಿ, ಇವರು ಪದೇಪದೇ ಈ ರೀತಿ ಎದ್ದುನಿಲ್ಲುವುದು ಸರಿಯಲ್ಲ.

ಚೇರ್‌ಮನ್.—ಕೊನೆಯಲ್ಲಿ ಉತ್ತರ ಕೊಡಲು ಸರ್ಕಾರಕ್ಕೆ ಅಧಿಕಾರವಿರುವುದರಿಂದ ಈಗ ಮಾನ್ಯ ಮಂತ್ರಿಗಳು ಪದೇಪದೇ ಮಾತನಾಡುವುದು ಬೇಡ.

ಶ್ರೀ ಎಂ. ವೀರಪ್ಪಮೊಯ್ಲಿ.—ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಉತ್ತರ ಕೊಡಲು ಸಂಪೂರ್ಣ ವಾದಂಥ ಅಧಿಕಾರವಿದೆ. ಈ ಒಂದು ಆಪಾದನೆಯನ್ನು ಬಾಯಿ ನಾನು ಮಾತಿನಲ್ಲಿಯಾಗಲೀ ಅಥವಾ ಭೌತಿಕವಾಗಿಯಾಗಲೀ ಮಾಡುತ್ತಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಹೈಕೋರ್ಟಿನ ಜಡ್ಜ್‌ಮೆಂಟ್ ಇದೆ. ಇದನ್ನು ಈ ಸದನದಲ್ಲಿ ಒಪ್ಪಿಸುವುದಕ್ಕೂ ಕೂಡ ನಾನು ತಯಾರಿದ್ದೇನೆ. ಹಿಂದೆ ಇವರು ಮಾಡಿದಂಥ ತಪ್ಪನ್ನು ಜನರು ಮರೆತಿದ್ದಾರೆಂದು ಯಾರೂ ತಿಳಿಯಬಾರದು.

ಶ್ರೀ ಎಚ್. ಡಿ. ದೇವೇಗೌಡ —ನಿಮ್ಮ ಸ್ಥಾನದಲ್ಲಿ ನಾನೂ ಕುಳಿತು ಬಹಳ ಮಾತನಾಡಿದ್ದೇನೆ. ಶ್ರೀ ದೇವರಾಜ ಅರಸ್ ಅವರು ಮುಖ್ಯಮಂತ್ರಿಗಳಿದ್ದಾಗ ನಾನು ಆ ಕಡೆ ಕುಳಿತು ನೋಡಿದ್ದೇನೆ. ತಾವು ೩ ವರ್ಷಗಳ ಕಾಲ ಅಧಿಕಾರ ನಡೆಸಿದಾಗಲೂ ಕೂಡ ನಾನು ಆ ಕಡೆ ಕುಳಿತು ನೋಡಿದ್ದೇನೆ. ಆದ್ದರಿಂದ ಹಿಂದೆ ಯಾವಾಗಲೋ ಆವಂಥ ತಪ್ಪನ್ನು ಈಗ ಹೇಳುವುದಕ್ಕೆ ಬದಲು ಕಳೆದ ಎರಡು ತಿಂಗಳುಗಳಿಂದ ನೀವು ಮಾಡಿದಂಥ ಕೆಲಸಗಳಲ್ಲಿ ಏನಾದರೂ ದೋಷಗಳು ಇದ್ದರೆ ಪತ್ತೆ ಮಾಡಿ ಹೇಳಿ. ಇದನ್ನು ಬಿಟ್ಟು ೧೯೬೯ನೇ ಇಸವಿಯಲ್ಲಿ ನಡೆದ ಘಟನೆ ಬಗ್ಗೆ ಹೇಳಲು ಹೋದರೆ ನಾವು ೧೯೫೯ನೇ ಇಸವಿಯಲ್ಲಿ ನಡೆದ ಘಟನೆ ಬಗ್ಗೆ ಹೇಳಬಹುದು. ಆದರೆ ಅದು ಸರಿಯಲ್ಲ. ಬೇಕಾದರೆ ತಾವು ಹೇಳಿದಂಥ ಘಟನೆ ಬಗ್ಗೆ ಉತ್ತರ ಕೊಡೋಣ. ಆದರೆ ನಾವು ಅಧಿಕಾರಕ್ಕೆ ಬಂದಮೇಲೆ ಏನಾದರೂ ಭ್ರಷ್ಟಾಚಾರ ನಡೆದಿದ್ದರೆ ಅದನ್ನು ಈಗ ಹೇಳಿ. ಈಗಾಗಲೇ ನಮ್ಮ ಸರ್ಕಾರ ಲೋಕಾಯುಕ್ತ ಪ್ರಾಧಿಕಾರವನ್ನು ರಚಿಸಲು ತೀರ್ಮಾನ ತೆಗೆದುಕೊಂಡಿದೆ. ಇದರ ಒಂದು ವ್ಯಾಪ್ತಿಗೆ ಮುಖ್ಯಮಂತ್ರಿಗಳೂ ಸಹ ಒಳಪಡುತ್ತಾರೆ. ಇಂತಹ ಒಂದು ಪ್ರಾಧಿಕಾರವನ್ನು ರಚನೆ ಮಾಡುತ್ತಿರುವುದರಲ್ಲಿ ಇಡೀ ರಾಷ್ಟ್ರದಲ್ಲಿಯೇ ನಮ್ಮ ರಾಜ್ಯ ಪ್ರಥಮವಾಗಿದೆ ಎಂಬುದನ್ನು ತಾವು ಅರ್ಥಮಾಡಿಕೊಳ್ಳಬೇಕು. ಈಗ ತಾವು ನಮ್ಮ ಚುನಾವಣಾ ಪ್ರಣಾಳಿಕೆ ಬಗ್ಗೆ ಹೇಳಿದ್ದೀರಿ. ಸಂತೋಷ. ಆದರೆ ಬಹಳ ಹಿಂದಿನದ್ದನ್ನೆಲ್ಲಾ ಈಗ ಹೇಳುತ್ತಾ ಹೋಗುವುದು ಸರಿಯಲ್ಲ.

5–00 P.M.

ನೀವು ದೇವರಾಜ ಅರಸ್‌ರವರ ಮಂತ್ರಿಮಂಡಳದಲ್ಲಿ ಮಂತ್ರಿಯಾಗಿರಬಹುದು. ನಿಜಲಿಂಗಪ್ಪನವರ ಮಂತ್ರಿಮಂಡಳದಲ್ಲಿ ಘಟನೆ ನಡೆದಿರಬಹುದು, ಈಗ ಅದೆಲ್ಲಾ ಬೇಡ. ನಮ್ಮ ಸರ್ಕಾರದ ೨ ತಿಂಗಳ ಅವಧಿಯಲ್ಲಿ ಏನಾದರೂ ನಡೆದಿದ್ದರೆ ತಿಳಿಸಿ. ನಾವು ಹೇಳಿರುವ ಪ್ರಣಾಳಿಕೆಗೆ ಬದ್ಧರಾಗಿದ್ದೇವೆ. ನಮ್ಮ ಅಧಿಕಾರಾವಧಿಯ ಕಾರ್ಯವ್ಯಾಪ್ತಿಯಲ್ಲಿ ಏನಾದರೂ ನಡೆದಿದ್ದರೆ ಅದನ್ನು ಎತ್ತಿ ತೋರಿಸಿ, ಅದಕ್ಕೆ ನನ್ನ ಅಭ್ಯಂತರವಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ದೇವೇಗೌಡರು ಹೇಳುವ ಮಾತಿನ ಪ್ರಾಮುಖ್ಯತೆಯಲ್ಲಿ ನಾನು ಸ್ವಲ್ಪ ನಂಬಿಕೆ ಇಡಬಹುದು. ಈಗ ಏನಾಗಿದೆ ಅಂದರೆ ಮಾತೆತ್ತಿದರೆ ಭ್ರಷ್ಟಾಚಾರ ಅಂದರೆ ೩೫ ವರ್ಷಗಳ ಕಾಲ ಈ ದೇಶದಲ್ಲಿ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರ ಮಾಡಿಕೊಂಡು ಬಂದರೂ ಜನರು ಸಂಮ್ಮನೆ ಇದ್ದರು ಎನ್ನುವ ಧಾಟಿಯಲ್ಲಿ ಹೇಳುತ್ತಿದ್ದಾರೆ; ತಾವು ಹೇಳಲಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ವಿರೋಧ ಪಕ್ಷವಾಗಲೀ ಆಳುವ ಪಕ್ಷವಾಗಲೀ ಕೆಲಸ ಮಾಡತಕ್ಕ ಕಾಲದಲ್ಲಿ ವಾದವಿವಾದಗಳಿಗೆ ಇತಿಮಿತಿ ಇಲ್ಲ. ೧೯೬೯ನೇ ಅವಿಭಾಜ್ಯ ಕಾಂಗ್ರೆಸ್‌ನಲ್ಲಿ ನಾನೂ ಕೂಡ ಇದ್ದೆ. ೧೯೬೨ನೇ ಇಸವಿಯಲ್ಲಿ ನಡೆಯಿತು ಎಂದು ನಾನೂ ಕೂಡ ಹೇಳಬಹುದು. ಮಂಖ್ಯಿಮಂತ್ರಿಗಳ ಮೇಲೆ ದೋಷಾರೋಪಣೆ ಬಂದಮೇಲೆ, ನಾವೆಲ್ಲಾ ಅವಿಭಾಜ್ಯ ಕಾಂಗ್ರೆಸ್‌ನಲ್ಲಿದ್ದೆವು ಎನ್ನುವುದನ್ನು ಎಲ್ಲರೂ ಮರೆತು ಹೇಳುತ್ತಿದ್ದಾರೆ. ನನ್ನ ವಿನಂತಿ ಏನೆಂದರೆ ೨ ತಿಂಗಳ ಈಚೆಗೆ ಏನಾದರೂ ಆರೋಪಣೆ ಇದ್ದರೆ ದಯಮಾಡಿ ತಿಳಿಸಿ. ನಾವು ಜನತೆಗೆ ವಾಗ್ದಾನ ಕೊಟ್ಟಿದ್ದೇವೆ, ಭ್ರಷ್ಟಾಚಾರವನ್ನು ಪ್ರಾಮಾಣಿಕ ಪ್ರಯತ್ನದಿಂದ ತಡೆಗಟ್ಟುತ್ತೇವೆಂದು ಮಾತು ಕೊಟ್ಟಿದ್ದೇವೆ. ಆ ರೀತಿ ನಾವು ನಡೆದುಕೊಳ್ಳುತ್ತೇವೆ. ಇಷ್ಟು ಮಾತ್ರ ತಿಳಿಸುತ್ತಿದ್ದೇವೆ.

ಶ್ರೀ ಎಂ. ವೀರಪ್ಪಮೊಯಿಲಿ.—ತಾವು ಹೇಗೆ ನಡೆದುಕೊಳ್ಳಬೇಕೆಂಬುದು ನಿಮಗೆ ಚೆನ್ನಾಗಿ ಗೊತ್ತು, ಅದು ನಿಮ್ಮ ಕರ್ತವ್ಯವಿದೆ. ನಿಮ್ಮ ಪ್ರಣಾಳಿಕೆಯಲ್ಲಿರುವಂತೆ ನಿಮ್ಮ ನಡವಳಿಕೆ ಇರಬೇಕಲ್ಲ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಅಧ್ಯಕ್ಷರೇ ೫ ಗಂಟೆ ಸಮಯ ಆಯಿತು.

ಛೇರ್ಮನ್.—ವಿರೋಧ ಪಕ್ಷದ ನಾಯಕರೇ, ತಮಗೆ ಇನ್ನೂ ಎಷ್ಟು ಸಮಯ ಬೇಕು ?

ಶ್ರೀ ಎಂ. ವೀರಪ್ಪಮೊಯಿಲಿ.—ನನಗೆ ಇನ್ನೂ ಒಂದು ಗಂಟೆ ಸಮಯ ಬೇಕು.

ಛೇರ್ಮನ್.—ಇಂದಿನ ಸಭೆಯ ಕಾರ್ಯಕಲಾಪಗಳನ್ನು ಇಲ್ಲಿಗೆ ಮುಕ್ತಾಯವಾದುವು, ನಾಳೆ ೧೧ ಗಂಟೆಗೆ ಪುನಃ ಸಭೆ ಸೇರಲಿದೆ.

(ಸಭೆಯು ೫ ಗಂಟೆ ೪ ನಿಮಿಷಕ್ಕೆ ಮುಕ್ತಾಯವಾಗಿ ಪುನಃ ಬುಧವಾರ ೧೬ನೇ ಮಾರ್ಚ್ ೧೯೮೩ ಬೆಳಿಗ್ಗೆ ೧೧ ಗಂಟೆಗೆ ಸೇರಲು ನಿಶ್ಚಯಿಸಲಾಯಿತು.)